

بِسْمِ اللّٰهِ الرَّحْمَٰنِ الرَّحِيمِ

# ನಮಾಝ್ ಕುರಿತು ಕರ್ಮಶಾಸ್ತ್ರ ಸಂಬಂಧವಾದ ಕೆಲವು ವಿವರಣೆಗಳು

(ಅಹ್ಮದಿಯಾ ಮುಸ್ಲಿಮ್ ಜಮಾಅತ್‌ನ ಐದನೇ ಖಲೀಫ, **ಹಝ್ರತ್ ಮಿರ್ಝಾ ಮಸ್‌ರೂರ್ ಅಹ್ಮದ್**, ಅವರು ಲಂಡನಿನ **'ಬೈತುಲ್ ಫುತೂಹ್'** ಮಸೀದಿಯಲ್ಲಿ 27–01–2017 ರಂದು ನೀಡಿದ **ಜುಮುಅ ಖುತ್‌ಬದ ಸಾರಾಂಶ**)

*(ತಶಹ್ಹುದ್, ತಅವ್ವುದ್ ಮತ್ತು ಸೂರತುಲ್ ಫಾತಿಹ ಪಠಿಸಿದ ನಂತರ) ಹಝ್ರತ್ ಖಲೀಫತುಲ್ ಮಸೀಹ್ ಖಾಮಿಸ್ ಅಯ್ಯದಹುಲ್ಲಾಹು ತಆಲಾ ಬಿನಸ್ರಿಹಿಲ್ ಅಝೀಝ್ ಹೀಗೆ ಹೇಳಿದರು:*

ಕಳೆದ ವಾರದ ಖುತ್‌ಬದಲ್ಲಿ ನಮಾಝ್‌ಗಳ ಮಹತ್ವ ಮತ್ತು ಅವುಗಳನ್ನು ಅನುಷ್ಠಿಸುವ ಬಗ್ಗೆ ನಾನು ಗಮನ ಸೆಳೆದಿದ್ದೆ. ಅನೇಕ ಜನರು ನನಗೆ ವೈಯ್ಯಕ್ತಿಕ ಪತ್ರಗಳನ್ನು ಬರೆದು ತಮ್ಮ ಉದಾಸೀನತೆ ಬಗ್ಗೆ ನಾಚಿಕೆಯನ್ನು ಸೂಚಿಸಿರುವರು. ಅನೇಕ ಸ್ಥಳಗಳಿಂದ ಜಮಾಅತಿನ ನಿಝಾಮ್‌ನಿಂದಲೂ ಅಧೀನ ಸಂಘಟನೆಗಳಿಂದಲೂ ಪತ್ರಗಳು ಬಂದುವು. ವಾಸ್ತವಿಕವಾಗಿಯೂ ಈ ವಿಷಯದ ಬಗ್ಗೆ ಉದಾಸೀನತೆ ಇದೆ ಎಂದು ಅವರು ತಿಳಿಸಿದರು. ಮುಂದೆ ಇದರ ಬಗ್ಗೆ ಬಲಿಷ್ಠವಾದ ಕಾರ್ಯ ಯೋಜನೆ ರೂಪಿಸುವುದಾಗಿಯೂ ಇನ್‌ಶಾಅಲ್ಲಾಹ್ ಇನ್ನು ಮುಂದೆ ಈ ವಿಷಯದ ಬಗ್ಗೆ ಉದಾಸೀನತೆ ತಲೆದೋರದ ಹಾಗೆ ಧಾರಾಳ ಪ್ರಯತ್ನ ಮಾಡುವುದಾಗಿ ಸಹ ಅವರು ಬರೆದಿದ್ದಾರೆ. ಅಲ್ಲಾಹನು ಅವರೆಲ್ಲರಿಗೂ ಹಾಗೆ ಮಾಡುವ ಭಾಗ್ಯ ನೀಡಲಿ. ನಮ್ಮ ಮಸ್‌ಜಿದ್‌ಗಳು ನಮಾಝ್ ಅನುಷ್ಠಿಸುವವರಿಂದ ಧಾರಾಳವಾಗಿ ತುಂಬಿರುವ ದೃಶ್ಯವನ್ನು ಪ್ರಕಟಿಸುವವುಗಳಾಗಲಿ. ಆದರೆ ಜಮಾಅತಿನ ನಿಝಾಮ್ ಯಾವಾಗಲೂ ನೆನಪಿಟ್ಟುಕೊಳ್ಳಬೇಕಾದುದೇನೆಂದರೆ ಪ್ರತಿಯೊಂದು ಕೆಲಸದ ಅತ್ಯುನ್ನತ ಮಟ್ಟದ ಪರಿಣಾಮ ಉಂಟುಮಾಡಲು ಸ್ಥಿರವಾಗಿ ಪ್ರಯತ್ನ ಮಾಡುವುದು ಆವಶ್ಯಕವಾಗಿದೆ. ನಮ್ಮಲ್ಲಿ ಹಲವರು ಆರಂಭದಲ್ಲಿ ಬಹಳ ಉತ್ಸಾಹದಿಂದ ಕೆಲಸ ಮಾಡುತ್ತಾರೆ. ಆದರೆ ಸ್ವಲ್ಪ ಸಮಯದ ನಂತರ ಉದಾಸೀನತೆ ಪ್ರಾರಂಭವಾಗುತ್ತದೆ. ಇದು ಮನುಷ್ಯನ ಪ್ರಕೃತಿಯೂ ಆಗಿದೆ. ವ್ಯಕ್ತಿಗಳಲ್ಲಿ ಉದಾಸೀನತೆ ತಲೆದೋರಿದರೆ ಅದು ಬಹಳ ಚಿಂತಾರ್ಹವಾದರೂ ಹೆಚ್ಚು ಅಪಾಯಕಾರಿ ಪರಿಣಾಮ ಬೀರಲಾರದು. ಆದರೆ ಜಮಾಅತಿನ ನಿಝಾಮಿನಲ್ಲಿ ಉದಾಸೀನತೆ ತಲೆದೋರಿದರೆ ಅದು ಅತ್ಯಂತ ಹೆಚ್ಚು ಅಪಾಯಕರವಾಗಿದೆ. ಜನರಿಗೆ ತಮ್ಮ ಕರ್ತವ್ಯಗಳ ಬಗ್ಗೆ ಗಮನ ಸೆಳೆಯಬೇಕಾದ ಜಮಾಅತಿನ ನಿಝಾಮ್ (ಆಡಳಿತೆ ವ್ಯವಸ್ಥೆ) ಸ್ವತಃ ಉದಾಸೀನತೆಯಿಂದ ವರ್ತಿಸಿ ನಿರ್ಲಕ್ಷ್ಯತೆಯಿಂದ ವರ್ತಿಸುವುದಾದರೆ ಜಮಾಅತಿನ ಜನರ ಸುಧಾರಣೆ ಬಹಳ ಕಷ್ಟಕರವಾಗುತ್ತದೆ.

ಅಧೀನ ಸಂಘಟನೆಗಳು ಮತ್ತು ಜಮಾಅತೀ ನಿಝಾಮ್, ಅಲ್ಲಾಹನು ನಮ್ಮ ಸೃಷ್ಟಿಯ ಉದ್ದೇಶವೆಂದು ಯಾವುದರ ಬಗ್ಗೆ ಹೇಳಿರುವನೋ ಅದರ ಬಗ್ಗೆ ಎಂತಹ ಯೋಜನೆ ರೂಪಿಸಬೇಕೆಂದರೆ, ಎಂತಹ ಕಾರ್ಯಕ್ರಮ ರಚಿಸಬೇಕೆಂದರೆ ಕಾಲ ಕಳೆದಂತೆ ಉದಾಸೀನತೆ ಮತ್ತು ಬಲಹೀನತೆ ತಲೆದೋರುವುದಕ್ಕೆ ಬದಲಾಗಿ ಪ್ರತಿದಿನ ಅಭಿವೃದ್ಧಿಯ ಕಡೆಗೆ ಒಯ್ಯುವಂತಾಗಬೇಕು. ನಮ್ಮ ಇಬಾದತ್‌ಗಳ ಅಭಿವೃದ್ಧಿಯೇ ನಮಗೆ ಜಯವನ್ನು ದೊರಕಿಸಿ ಕೊಡುವುದಾಗಿದೆ. ಆದುದರಿಂದ ಇದು ಬಹಳ ಮಹತ್ವಪೂರ್ಣವಾದ ಸಂಗತಿಯಾಗಿದೆ. ನಮ್ಮ ಜಮಾಅತಿನ ನಿಝಾಮ್ ಈ ಬಗ್ಗೆ ಬಹಳ ಲಕ್ಷ್ಯ ನೀಡಬೇಕಾದುದು ಆವಶ್ಯಕವಾಗಿದೆ. ಲಜ್‌ನ ಇಮಾಇಲ್ಲಾಹ್ ಸಹ ಇದಕ್ಕೆ ಸಂಬಂಧಿಸಿ ತನ್ನ ಕೆಲಸ ಮಾಡಬೇಕಾಗಿದೆ. ಅವರು ಮನೆಗಳಲ್ಲಿ ಮಕ್ಕಳು ನಮಾಝ್ ಮಾಡುವುದರ ಬಗ್ಗೆ ಮೇಲ್ವಿಚಾರಣೆ ನಡೆಸಬೇಕು. ಅವರಿಗೆ ನಮಾಝ್ ನಿರ್ವಹಿಸುವ ಅಭ್ಯಾಸವಾಗುವಂತೆ ಮಾಡಬೇಕು. ಪುರುಷರು ಮತ್ತು ಯುವಕರು ಮಸ್‌ಜಿದ್‌ಗೆ ಹೋಗಬೇಕೆಂದು ನಿರಂತರವಾಗಿ ಗಮನ ಹರಿಸಬೇಕಾದುದು ಮಹಿಳೆಯರ ಕೆಲಸವಾಗಿದೆ. ಮಹಿಳೆಯರು ತಮ್ಮ ಈ ಕರ್ತವ್ಯಗಳನ್ನು ಸರಿಯಾಗಿ ನಿಭಾಯಿಸಿದರೆ ಅಸಾಮಾನ್ಯ ಬದಲಾವಣೆ ತಲೆದೋರುವುದು.

ನಾನು ಇಲ್ಲಿ ಕೆಲವು ಜನರಲ್ಲಿರುವ ಒಂದು ತಪ್ಪು ತಿಳುವಳಿಕೆಯನ್ನು ನಿವಾರಿಸಲು ಬಯಸುತ್ತೇನೆ. ಕೆಲವರು ಹೇಳುತ್ತಾರೆ: ನಮಾಝ್ ಬಗ್ಗೆ ನಮ್ಮೊಂದಿಗೆ ಏನೂ ಹೇಳಬೇಡಿರಿ. ಏನೂ ಕೇಳಬೇಡಿರಿ. ಅದು ನಮ್ಮ ಮತ್ತು ಅಲ್ಲಾಹನ ಮಧ್ಯೆ ಇರುವ ವಿಷಯವಾಗಿದೆ ಎಂದು. ಅನೇಕ ಮಹಿಳೆಯರು ನನಗೆ ದೂರು ನೀಡಿರುತ್ತಾರೆ. ನಾವು ನಮ್ಮ ಪತಿಯಂದಿರಿಗೆ ನಮಾಝ್ ಬಗ್ಗೆ ಗಮನ ಹರಿಸಿದರೆ ಅವರು ಜಗಳ ಮಾಡಲು ಪ್ರಾರಂಭಿಸುತ್ತಾರೆ ಎಂದು ಬರೆಯುತ್ತಾರೆ. ಇಂತಹ ಜನರೊಂದಿಗೆ ನಾನು ಹೇಳಲು ಬಯಸುವುದೇನೆಂದರೆ, ಇದು ನಿಸ್ಸಂಶಯವಾಗಿಯೂ ಅಲ್ಲಾಹನ ಮತ್ತು ಅವನ ದಾಸರ ಮಧ್ಯೆ ಇರುವ ವಿಷಯವಾಗಿದೆ. ಆದರೆ ನಮಾಝ್ ಬಗ್ಗೆ ಗಮನ ಹರಿಸುವುದು ಮತ್ತು ಪ್ರಶ್ನೆ ಕೇಳುವುದು ಜಮಾಅತಿನ ನಿಝಾಮಿನ ಕೆಲಸವಾಗಿದೆ. ಅದೇರೀತಿ ಇದು ಪತ್ನಿಯರು ಮಾಡಬೇಕಾದ ಕೆಲಸವೂ ಆಗಿದೆ. ಮಾತ್ರವಲ್ಲ ಅವರ ಕಡ್ಡಾಯ ಕರ್ತವ್ಯ ಸಹ ಆಗಿದೆ. ಹಝ್ರತ್ ಮುಹಮ್ಮದ್ ಸಲ್ಲಲ್ಲಾಹು ಅಲೈಹಿ ವಸಲ್ಲಮರು ಉಪದೇಶಿಸಿರುವುದೇನೆಂದರೆ ಪತಿ ಪತ್ನಿಯರಲ್ಲಿ ಯಾರು ನಮಾಝ್‌ಗೋಸ್ಕರ ನಿದ್ರೆಯಿಂದ ಮೊದಲು ಎದ್ದೇಳುತ್ತಾರೋ ಅವರು ಇನ್ನೊಬ್ಬರನ್ನು ನಮಾಝ್ ಮಾಡಲು ಎಬ್ಬಿಸಬೇಕು. ನಿದ್ರೆಯಿಂದ ಏಳದಿದ್ದರೆ ಅಥವಾ ಉದಾಸೀನತೆ ಪ್ರಕಟಿಸಿದರೆ ಮುಖಕ್ಕೆ ನೀರ ಹನಿಗಳನ್ನು ಚಿಮುಕಿಸಬೇಕು ಎಂದು ಹೇಳಿರುವರು. ಆದುದರಿಂದ ಈ ವಿಷಯಕ್ಕೆ ಸಂಬಂಧಿಸಿ ನಾವು ಸ್ವತಂತ್ರರಾಗಿದ್ದೇವೆ. ಇದು ನಮ್ಮ ಮತ್ತು ಅಲ್ಲಾಹನ ಮಧ್ಯೆ ಇರುವ ವಿಷಯ ಎಂದು ಯೋಚಿಸುವುದು ತಪ್ಪಾಗಿದೆ. ಯಾವ ಜಮಾಅತ್ ನಿಝಾಮ್‌ನೊಂದಿಗೆ ಒಬ್ಬ ವ್ಯಕ್ತಿ ತನ್ನನ್ನು ಜೋಡಿಸಿರುವನೋ ಆ ನಿಝಾಮ್ ತನ್ನ ಜಮಾಅತಿನ ಜನರನ್ನು ಪರಿಶೋಧಿಸಲು ನಮಾಝ್ ಅನುಷ್ಠಾನದ ಬಗ್ಗೆ ಪ್ರಶ್ನಿಸುವುದಾದರೆ ಅದರ ಬಗ್ಗೆ ಸಿಟ್ಟುಗೊಳ್ಳದೆ, ಸಹಕರಿಸಬೇಕಾದುದು ಆವಶ್ಯಕವಾಗಿದೆ.

ಒಟ್ಟಾರೆ ಹೇಳುವುದಾದರೆ ಪ್ರತಿಯೊಬ್ಬನಿಗೆ ನಮಾಝ್‌ಗಳ ಮಹತ್ವವೇನೆಂದು ಸ್ಪಷ್ಟವಾಗಬೇಕು ಮತ್ತು ಅದನ್ನು ಅಲ್ಲಾಹನ ಮತ್ತು ಅಲ್ಲಾಹನ ಸಂದೇಶವಾಹಕರ ಆಜ್ಞೆ ಪ್ರಕಾರ ಬಹಳ ನಿಷ್ಠೆಯಿಂದ ಅನುಷ್ಠಿಸಲು ಪ್ರಯತ್ನ ಮಾಡಬೇಕು.

ಇನ್ನು ನಾನು ನಮಾಝ್‌ಗಳಿಗೆ ಸಂಬಂಧಿಸಿ ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮರು ನೀಡಿದ ಕೆಲವು ಉಪದೇಶಗಳನ್ನು ಉಲ್ಲೇಖಿಸುವೆನು. ಅವು **ಫಿಕ್‌ಹ್**‌ಗೆ (ಕರ್ಮಶಾಸ್ತ್ರಕ್ಕೆ) ಸಂಬಂಧಿಸಿದವುಗಳಾಗಿವೆ. ಅವುಗಳಲ್ಲಿ ಒಂದು, **ಅಲ್ಲಾಹು ಅಕ್‌ಬರ್** ಎಂದು ಹೇಳುವಾಗಲೆಲ್ಲಾ ಕೈ ಎತ್ತುವುದು (ರಫ್‌ಅ್‌ಯದೈನ್) ಬಗ್ಗೆಯಾಗಿದೆ. ಎಂದರೆ ಪ್ರತಿಯೊಂದು ತಕ್‌ಬೀರ್ ಹೇಳುವಾಗ ಕಿವಿ ತನಕ ಕೈ ಎತ್ತುವುದು. ಇದರ ಬಗ್ಗೆ ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮರು ಹೇಳುವುದೇನೆಂದರೆ, ಕೈ ಎತ್ತಿದರೂ ಎತ್ತದಿದ್ದರೂ ಆಕ್ಷೇಪವಿಲ್ಲ; ಏಕೆಂದರೆ ಹದೀಸುಗಳಲ್ಲಿ ಇವೆರಡನ್ನೂ ಉಲ್ಲೇಖಿಸಲಾಗಿದೆ. ಹಝ್ರತ್ ಮುಹಮ್ಮದ್ ಸಲ್ಲಲ್ಲಾಹು ಅಲೈಹಿ ವಸಲ್ಲಮರು ಕೆಲವು ಸಮಯ ರಫ್‌ಅ್‌ಯದೈನ್ ಮಾಡಿದರು. ಅನಂತರ ಹಾಗೆ ಮಾಡುವುದನ್ನು ಬಿಟ್ಟರೆಂದು ತಿಳಿದು ಬರುತ್ತದೆ.

ಸಾಹಿಬ್ ಝಾದ ಮಿರ್ಝಾ ಬಶೀರ್ ಅಹ್ಮದ್ ಸಾಹಿಬರು ಬರೆಯುತ್ತಾರೆ: ನನ್ನೊಂದಿಗೆ ಮಿಯಾಂ ಅಬ್ದುಲ್ಲಾ ಸನ್‌ವರಿ ಸಾಹಿಬ್ ಹೇಳಿದರು: ನಾನು ತೀವ್ರ **ಗೈರ್ ಮುಖಲ್ಲಿದ್** ಆಗಿದ್ದೆನು. ರಫ್‌ಅ್‌ಯದೈನ್ ಮತ್ತು ಆಮೀನ್ ಬಿಲ್ ಜಹ್ರ್ (ಉಚ್ಛಸ್ವರದಲ್ಲಿ ಆಮೀನ್ ಹೇಳುವುದು) ನನ್ನ ಸ್ವಭಾವವಾಗಿತ್ತು. ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮರನ್ನು ಬೇಟಿಯಾದ ನಂತರ ಸಹ ನಾನು ದೀರ್ಘಕಾಲ ಹೀಗೆಯೇ ಮಾಡುತ್ತಿದ್ದೆನು. ಅನಂತರ ಒಮ್ಮೆ ನಾನು ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮರ ಹಿಂದೆ ನಿಂತು ನಮಾಝ್ ಮಾಡಿದಾಗ, ನಮಾಝ್ ನಂತರ ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಮುಗುಳು ನಗುತ್ತಾ ಹೀಗೆ ಹೇಳಿದರು: 'ನೀವು ಈ ಸುನ್ನತ್ ಬಹಳ ಕಾಲ ಅನುಷ್ಠಿಸಿರುವಿರಿ.' ಅದು ರಫ್‌ಅ್‌ಯದೈನ್ ಬಗ್ಗೆ ಸೂಚಿಸಿ ಹೇಳಿದ್ದಾಗಿತ್ತು. ಮಿಯಾಂ ಅಬ್ದುಲ್ಲಾ ಸಾಹಿಬ್ ಹೇಳುತ್ತಾರೆ: ನಾನು ಆ ದಿನದಿಂದ ರಫ್‌ಅ್‌ಯದೈನ್ ಮಾಡುವುದನ್ನು ಬಿಟ್ಟೆನು. ಆಮೀನ್ ಎಂದು ಉಚ್ಛಸ್ವರದಲ್ಲಿ ಹೇಳುವುದನ್ನು ಸಹ ಬಿಟ್ಟೆನು.

ಅಬ್ದುಲ್ಲಾ ಸಾಹಿಬ್ ಹೇಳುತ್ತಾರೆ: ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ರಫ್‌ಅ್‌ಯದೈನ್ ಮಾಡುವುದನ್ನು ನಾನು ಕಂಡಿಲ್ಲ ಮತ್ತು ಆಮೀನ್ ಉಚ್ಛಸ್ವರದಲ್ಲಿ ಉಚ್ಚರಿಸುವುದನ್ನು ನಾನು ಆಲಿಸಿಲ್ಲ. ಬಿಸ್ಮಿಲ್ಲಾ ಉಚ್ಚಸ್ವರದಲ್ಲಿ ಓದುವುದು ಸಹ ನಾನು ಆಲಿಸಿಲ್ಲ.

ಅಹ್ಮದಿಯರಾದ ನಮ್ಮವರಲ್ಲಿ ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮರ ಕಾಲದಲ್ಲಿಯೂ ಅನಂತರ ಕಾಲದಲ್ಲಿಯೂ ಇಂದಿನ ತನಕ ಸಹ ಈ ವಿಷಯಗಳಿಗೆ ಸಂಬಂಧಿಸಿ ಒಬ್ಬರನ್ನೊಬ್ಬರು ಆಕ್ಷೇಪಿಸುವುದಿಲ್ಲ. ಕೆಲವರು ಉಚ್ಚಸ್ವರದಲ್ಲಿ ಆಮೀನ್ ಹೇಳುತ್ತಾರೆ. ಕೆಲವರು ಉಚ್ಚಸ್ವರದಲ್ಲಿ ಆಮೀನ್ ಹೇಳುವುದಿಲ್ಲ. ಕೆಲವರು ರಫ್‌ಅ್‌ಯದೈನ್ ಮಾಡುತ್ತಾರೆ. ಆದರೆ ಬಹುತೇಕ ಜನರು ರಫ್‌ಅ್‌ಯದೈನ್ ಮಾಡುವುದಿಲ್ಲ. ಈಗಲಾದರೋ ಯಾರೂ ರಫ್‌ಅ್‌ಯದೈನ್ ಮಾಡುವುದಿಲ್ಲ. ಹೊಸದಾಗಿ ಜಮಾಅತಿಗೆ ಸೇರಿದ ಕೆಲವರು ಪ್ರಾರಂಭದಲ್ಲಿ ರಫಅ್‌ಯದೈನ್ ಮಾಡುತ್ತಿರಬಹುದು. ಅವರು ಸಹ ಕ್ರಮೇಣ ಅದನ್ನು ಬಿಟ್ಟುಬಿಡುತ್ತಾರೆ.

ಇನ್ನೊಂದು ಪ್ರಶ್ನೆ ಕೈ ಕಟ್ಟುವುದರ ಬಗ್ಗೆಯಾಗಿದೆ. ಹಝ್ರತ್ ಮಿರ್ಝಾ ಬಶೀರ್ ಅಹ್ಮದ್ ಸಾಹಿಬ್ ಹೇಳುತ್ತಾರೆ: ನನ್ನೊಂದಿಗೆ ಮೌಲವಿ ಸಯ್ಯದ್ ಮುಹಮ್ಮದ್ ಸರ್‌ವರ್ ಶಾ ಸಾಹಿಬರು ಹೇಳಿದರು: ಹಝ್ರತ್ ಖಲೀಫ ಅವ್ವಲ್‌ರಿಗೆ ಒಂದು ಪತ್ರ ಬಂದಿತ್ತು. ಕೆಲವರು ನಮಾಝ್‌ನಲ್ಲಿ ಕೈ ಕಟ್ಟುವಾಗ ನಾಭಿಯ ಕೆಳಗೆ ಕೈ ಕಟ್ಟುತ್ತಾರೆ. ಕೆಲವರು ಮಧ್ಯದಲ್ಲಿ ಮತ್ತೆ ಕೆಲವರು ಬಹಳ ಮೇಲಕ್ಕೆ ಕೈ ಕಟ್ಟುತ್ತಾರೆ. ಆದುದರಿಂದ ಕೈ ಕಟ್ಟುವ ಸರಿಯಾದ ಕ್ರಮ ಯಾವುದು, ಹಾಗೂ ನಾಭಿಗಿಂತ ಬಹಳ ಮೇಲೆ ಕೈ ಕಟ್ಟುವ ಬಗ್ಗೆ ಹದೀಸು ಏನಾದರೂ ಇದೆಯೇ ಎಂದು ಪ್ರಶ್ನಿಸಲಾಗಿತ್ತು. ಹಝ್ರತ್ ಖಲೀಫತುಲ್ ಮಸೀಹ್ ಅವ್ವಲ್ ಆ ಪತ್ರವನ್ನು ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮರ ಮುಂದೆ ಇರಿಸಿ, ಇದರ ಬಗ್ಗೆ ದೊರಕುವ ಹದೀಸುಗಳು ವಿಮರ್ಶೆಗೆ ಪಾತ್ರವಾಗಿವೆ ಎಂದು ಹೇಳಿದರು. ಆಗ ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮರು ಹೇಳಿದರು: ನನ್ನ ಜೀವಿತದ ಆರಂಭದ ಕಾಲದಲ್ಲಿ ನಮ್ಮ ಸುತ್ತುಮುತ್ತಲೂ ಹನಫೀ ಜನರಿದ್ದರೂ ನಮಾಝ್ ಮಾಡುವಾಗ ನಾಭಿಯ ಕೆಳಗೆ ಕೈ ಕಟ್ಟುವುದನ್ನು ನಾನು ಇಷ್ಟಪಡುತ್ತಿರಲಿಲ್ಲ. ನಾಭಿಗಿಂತ ಮೇಲ್‌ಭಾಗದಲ್ಲಿ ಕೈ ಕಟ್ಟುವ ಬಗ್ಗೆ ನನಗೆ ಒಲವು ಇತ್ತು. ನಾವು ಪದೇ ಪದೇ ಅನುಭವದಿಂದ ತಿಳಿದುಕೊಂಡಿರುವುದೇನೆಂದರೆ ಯಾವುದನ್ನು ಮಾಡುವ ಬಗ್ಗೆ ನಮಗೆ ಒಲವುಂಟಾಗುತ್ತದೆಯೋ ಅದರ ಬಗ್ಗೆ ಹದೀಸುಗಳನ್ನು ಹುಡುಕಿದರೆ ದೊರೆಯುತ್ತವೆ. ಆದುದರಿಂದ ತಾವು ನಾಭಿಗಿಂತ ಮೇಲ್‌ಭಾಗದಲ್ಲಿ ಕೈ ಕಟ್ಟುವ ಬಗ್ಗೆ ಹದೀಸುಗಳನ್ನು ಹುಡುಕಿರಿ. ಖಂಡಿತವಾಗಿ ಸಿಗುವುದು ಏಕೆಂದರೆ ನನ್ನ ಒಲವು ಅದರ ಬಗ್ಗೆ ಇದೆ. ನಾನು ನೋಡಿರುವುದೇನೆಂದರೆ ಸಾಮಾನ್ಯವಾಗಿ ನನ್ನ ಒಲವನ್ನು ಬೆಂಬಲಿಸುವ ಹದೀಸುಗಳು ದೊರಕುತ್ತವೆ ಎಂದು ಹೇಳಿದರು.

ಮೌಲವಿ ಸರ್‌ವರ್ ಶಾ ಸಾಹಿಬ್ ಹೇಳುತ್ತಾರೆ: ಖಲೀಫತುಲ್ ಮಸೀಹ್ ಅವ್ವಲ್ ಒಳಗೆ ಹೋದರು. ಅರ್ಧ ಗಂಟೆಯೊಳಗೆ ಒಂದು ಪುಸ್ತಕ ತೆಗೆದುಕೊಂಡು ಸಂತೋಷದಿಂದ ಮರಳಿ ಬಂದು ಹೇಳಿದರು: ಹುಝೂರ್ ಹದೀಸು ಲಭಿಸಿತು. ಈ ಹದೀಸಿನ ಬಗ್ಗೆ ಹಝ್ರತ್ ಅಬೂಬಕರ್ ಮತ್ತು ಹಝ್ರತ್ ಉಮರ್ ಇಬ್ಬರೂ ಒಮ್ಮತ ಪ್ರಕಟಿಸಿದ್ದಾರೆ. ಹದೀಸು ಸಂಶಯಾಸ್ಪದವಲ್ಲ ಎಂದು ಹೇಳಿದರು.

ಒಬ್ಬ ವ್ಯಕ್ತಿ ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮರೊಂದಿಗೆ ಪ್ರಶ್ನಿಸಿದರು: ಅತ್ತಹಿಯ್ಯಾತ್‌ನಲ್ಲಿ ತೋರು ಬೆರಳು ಎತ್ತುವುದು ಏಕೆ? ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಹೇಳಿದರು: ಅಜ್ಞಾನ

ಕಾಲದಲ್ಲಿ ಅರಬರು ತೋರು ಬೆರಳನ್ನು ಬೈಯ್ಯಲು ಬಳಸುತ್ತಿದ್ದರು. ಅದನ್ನು **ಸಬಾಬ** ಅಥವಾ ಬೈಯ್ಯುವ ಬೆರಳು ಎಂದು ಕರೆಯಲಾಗುತ್ತಿತ್ತು. ಅಲ್ಲಾಹನು ಅರಬಿಗಳನ್ನು ಸುಧಾರಣೆ ಮಾಡಿದನು. ಅವರ ದುಸ್ವಭಾವವನ್ನು ಬಿಡಿಸಿದನು. ಅಲ್ಲಾಹನನ್ನು ಏಕನೆಂದು ಸಾಕ್ಷ್ಯ ಹೇಳುವಾಗ ಈ ಬೆರಳನ್ನು ಎತ್ತಿ ತೋರಿಸಿರಿ ಎಂದು ಹೇಳಿದನು. ಹಾಗೆ ಅದನ್ನು ಶಹಾದತ್ ನೀಡುವ ಬೆರಳು ಎಂದು ಅಲ್ಲಾಹನು ಹೆಸರಿಸಿದನು. ಅದೇರೀತಿ ಅರಬಿಗಳು ಐದು ಹೊತ್ತು ಮದ್ಯ ಸೇವನೆ ಮಾಡುತ್ತಿದ್ದರು. ಅದಕ್ಕೆ ಬದಲಾಗಿ ಐದು ಹೊತ್ತಿನ ನಮಾಝ್ ನಿಗದಿ ಪಡಿಸಲಾಯಿತು.

ರುಕೂಅ್ ಮತ್ತು ಸುಜೂದ್‌ಗಳಲ್ಲಿ ಪವಿತ್ರ ಖುರ್‌ಆನಿನ ಪ್ರಾರ್ಥನೆಗಳನ್ನು ಉಚ್ಚರಿಸುವ ಬಗ್ಗೆ ಮೌಲವಿ ಅಬ್ದುಲ್ ಖಾದಿರ್ ಸಾಹಿಬ್ ಲುಧ್‌ಯಾನವಿ ಹಝ್ರತ್ ಮಸೀಹ್‌ಮೌಊದ್ ಅಲೈಹಿಸ್ಸಲಾಮರೊಂದಿಗೆ ಪ್ರಶ್ನೆ ಕೇಳಿದರು: ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಹೇಳಿದರು: **ಸುಜೂದ್** ಮತ್ತು **ರುಕೂಅ್** ಅತ್ಯಂತ ದೈನ್ಯಾವಸ್ಥೆಯಾಗಿದೆ. ಅಲ್ಲಾಹನ ವಚನ ವೈಭವವನ್ನು ಬಯಸುತ್ತದೆ. ಅಲ್ಲದೆ ಹಝ್ರತ್ ಮುಹಮ್ಮದ್ ಸಲ್ಲಲ್ಲಾಹು ಅಲೈಹಿ ವಸಲ್ಲಮರು ರುಕೂಅ್ ಮತ್ತು ಸುಜೂದ್‌ಗಳಲ್ಲಿ ಪವಿತ್ರ ಖುರ್‌ಆನಿನ ದುಆಗಳನ್ನು ಉಚ್ಚರಿಸಿದ ಬಗ್ಗೆ ಹದೀಸುಗಳಿಂದ ಸಾಬೀತಾಗುವುದಿಲ್ಲ ಎಂದು ಹೇಳಿದರು.

ಹಝ್ರತ್ ಖಲೀಫತುಲ್ ಮಸೀಹ್ ಸಾನಿಯವರೊಂದಿಗೆ ಒಬ್ಬರು ಕೇಳಿದರು: ಸುಜೂದ್‌ನ ಸ್ಥಿತಿ ಅತ್ಯಂತ ದೈನ್ಯಾವಸ್ಥೆಯಾಗಿರುವುದರಿಂದ ಸುಜೂದ್‌ನಲ್ಲಿ ಪವಿತ್ರ ಖುರ್‌ಆನಿನ ಪ್ರಾರ್ಥನೆಗಳನ್ನು ಏಕೆ ಓದಬಾರದು? ಹಝ್ರತ್ ಖಲೀಫತುಲ್ ಮಸೀಹ್ ಸಾನಿ ಹೇಳಿದರು: ಸುಜೂದ್‌ನಲ್ಲಿ ಪವಿತ್ರ ಖುರ್‌ಆನಿನ ಪ್ರಾರ್ಥನೆಗಳನ್ನು ಉಚ್ಚರಿಸಬಹುದೆಂಬುದು ನನ್ನ ವೈಯಕ್ತಿಕ ಅಭಿಪ್ರಾಯವಾಗಿತ್ತು. ಆದರೆ ನಂತರ ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮರು ಸುಜೂದ್‌ನಲ್ಲಿ ಪವಿತ್ರ ಖುರ್‌ಆನಿನ ಪ್ರಾರ್ಥನೆಗಳನ್ನು ಉಚ್ಚರಿಸಬಾರದೆಂದು ಹೇಳಿದ ಉಲ್ಲೇಖ ದೊರಕಿತು. ಇದೇ ವಿಷಯದ ಬಗ್ಗೆ ಮುಸ್‌ನದ್ ಅಹ್ಮದ್ ಬಿನ್ ಹಂಬಲ್‌ನಲ್ಲಿ ಒಂದು ಹದೀಸ್ ಸಹ ಲಭಿಸಿದೆ. ಆದುದರಿಂದ ಹಝ್ರತ್ ಮುಹಮ್ಮದ್ ಸಲ್ಲಲ್ಲಾಹು ಅಲೈಹಿ ವಸಲ್ಲಮರು ಮತ್ತು ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮರು ಹೇಳಿದ ಮಾತುಗಳು ನಮಗೆ ಲಭಿಸಿರುವಾಗ ಅದಕ್ಕೆ ವಿರುದ್ಧವಾದ ರೀತಿಯಲ್ಲಿ ವರ್ತಿಸುವುದು —ಅದು ನಮಗೆ ಅರ್ಥವಾಗದಿದ್ದರೂ– ಸರಿಯಾದುದಲ್ಲ. ನಾವು ನಮಗೆ ದೊರಕಿದ ಆಜ್ಞೆ ಪ್ರಕಾರವೇ ವರ್ತಿಸಬೇಕಾಗಿದೆ.

ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮರೊಂದಿಗೆ ಹೀಗೆ ಕೇಳಲಾಯಿತು: ಒಬ್ಬನು ನಮಾಝುನ್ನು ರುಕೂಅ್ ಸಮಯದಲ್ಲಿ ಬಂದು ಸೇರಿದರೆ ಅವನ ರಕಅತ್ ಪೂರ್ಣವಾಗುತ್ತದೆಯೋ ಇಲ್ಲವೋ ಎಂದು. ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಹೇಳಿದರು: ನಮ್ಮ ಅಭಿಪ್ರಾಯ, **ಲಾ ಸಲಾತ ಇಲ್ಲಾ ಬಿಫಾತಿಹತಿಲ್‌ಕಿತಾಬ್** ಎಂದಾಗಿದೆ. ಅಂದರೆ, ಸೂರತುಲ್ ಫಾತಿಹ ಇಲ್ಲದೆ ನಮಾಝ್ ಆಗಲಾರದು. ಒಬ್ಬನು ಒಬ್ಬಂಟಿಗನಾಗಿಯಾದರೂ ಅಥವಾ ಇಮಾಮ್ ಹಿಂದೆ ನಿಂತು ನಮಾಝ್ ಮಾಡುವಾಗಲೂ ಸೂರತುಲ್ ಫಾತಿಹ ಓದಲೇಬೇಕು. ಇಮಾಮ್ ಸಹ ನಿಧಾನವಾಗಿ (ನಿಲ್ಲಿಸಿ ನಿಲ್ಲಿಸಿ) ಸೂರತುಲ್ ಫಾತಿಹ ಓದಬೇಕು. ಯಾಕೆಂದರೆ ಇಮಾಮ್ ಹಿಂದೆ ನಿಂತವನು ಆಲಿಸಬೇಕು ಮತ್ತು ಅದನ್ನು ಪುನರಾವರ್ತಿಸಲು ಸಾಧ್ಯವಾಗಬೇಕು. ಒಂದು ವಚನ ಓದಿದ ನಂತರ ಅದನ್ನು ತನ್ನ ಹಿಂದೆ ನಿಂತವನು ಪುನರುಚ್ಚರಿಸಲು ಇಮಾಮ್ ಸ್ವಲ್ಪ ಸಮಯ ಕೊಡಬೇಕು. ಹಿಂದೆ ನಿಂತವನು ಸೂರತುಲ್ ಫಾತಿಹ ಆಲಿಸಿ ಉಚ್ಚರಿಸಬೇಕಾದುದು ಆವಶ್ಯಕವಾಗಿದೆ. ಏಕೆಂದರೆ ಸೂರತುಲ್ ಫಾತಿಹ ಉಮ್ಮುಲ್ ಕಿತಾಬ್ ಆಗಿದೆ. ಆದರೆ ಒಬ್ಬನು ನಮಾಝ್‌ಗೆ ಸೇರಲು ಪ್ರಯತ್ನಿಸಿದರೂ ಅವನಿಗೆ ರುಕೂಅ್‌ಗೆ ಮಾತ್ರ ಸೇರಲು ಸಾಧ್ಯವಾದರೆ, ಅವನಿಗೆ ಅದರ ಮೊದಲು ಸೇರಲು ಸಾಧ್ಯವಾಗದಿದ್ದರೆ ಅವನಿಗೆ ಆ ರಕಅತ್ ಪೂರ್ಣವಾಗುತ್ತದೆ. ಅವನು ಸೂರತುಲ್ ಫಾತಿಹ ಓದದಿದ್ದರೂ ಅವನಿಗೆ ಆ ರಕಅತ್ ಸಿಗುತ್ತದೆ. ಏಕೆಂದರೆ, ರುಕೂಅ್ ಸಮಯದಲ್ಲಿ ನಮಾಝ್‌ಗೆ ಸೇರಿದವನಿಗೆ ರಕಅತ್ ಪೂರ್ಣ ಆಗುತ್ತದೆ ಎಂದು ಹದೀಸ್‌ಗಳಲ್ಲಿ ಬಂದಿರುತ್ತದೆ. ಆದರೆ ಯಾರು ಉದ್ದೇಶಪೂರ್ವಕವಾಗಿ ಉದಾಸೀನತೆಯಿಂದ ವರ್ತಿಸಿ ಬಾಜಮಾಅತ್ ನಮಾಝ್‌ನಲ್ಲಿ ಸೇರಲು ತಡಮಾಡುತ್ತಾನೋ ಅವನ ನಮಾಝ್ ನಿಷ್ಫಲವಾಗುತ್ತದೆ.

ಒಂದು ಪ್ರಶ್ನೆ ಕೇಳಲಾಯಿತು. ಇಮಾಮರ ಹಿಂದೆ ನಿಂತು ನಮಾಝ್ ಮಾಡುವಾಗ ಸೂರತುಲ್ ಫಾತಿಹ ಓದದಿದ್ದರೆ ಅವನ ನಮಾಝ್ ಸರಿಯಾಗುವುದೋ ಇಲ್ಲವೋ? ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಹೇಳಿದರು: ನಮಾಝ್ ಸರಿಯಾಗುವುದೋ ಇಲ್ಲವೋ ಎಂದು ಪ್ರಶ್ನೆ ಕೇಳಬಾರದು. ಇಮಾಮರ ಹಿಂದೆ ಸೂರತುಲ್ ಫಾತಿಹ ಓದಬೇಕೋ ಬೇಡವೋ ಎಂದು ಪ್ರಶ್ನೆ ಕೇಳಿರಿ. ನಾವು ಹೇಳುವುದೇನೆಂದರೆ, ಸೂರತುಲ್ ಫಾತಿಹ ಆವಶ್ಯಕವಾಗಿಯೂ ಓದಬೇಕು. ನಮಾಝ್ ಸರಿಯಾಗುವುದೋ ಇಲ್ಲವೋ ಎಂದು ಅಲ್ಲಾಹನಿಗೆ ಮಾತ್ರ ತಿಳಿದಿರುವ ವಿಷಯವಾಗಿದೆ.

ಹನಫಿಗಳು ಇಮಾಮರ ಹಿಂದೆ ನಿಂತಾಗ ಸೂರತುಲ್ ಫಾತಿಹ ಪಠಿಸುವುದಿಲ್ಲ. ಹನಫಿಗಳಲ್ಲಿ ಅನೇಕ ಸಂತರು ಆಗಿ ಹೋಗಿದ್ದಾರೆ. ಅವರು ಇಮಾಮರ ಹಿಂದೆ ಸೂರತುಲ್ ಫಾತಿಹ ಪಠಿಸುತ್ತಿರಲಿಲ್ಲ. ಅವರ ನಮಾಝ್‌ಗಳು ಸರಿಯಾಗಲಿಲ್ಲವಾದರೆ ಅವರು ಸಂತರಾದುದು ಹೇಗೆ? ನಮಗೆ ಇಮಾಮ್ ಅಅ್‌ಝುಮ್ (ಅಬೂ ಹನೀಫ)ರೊಂದಿಗೆ ಒಂದು ರೀತಿಯ ಸಾಮ್ಯತೆ ಇದೆ. ನಾವು ಅವರನ್ನು ಬಹಳ ಗೌರವಿಸುತ್ತೇವೆ. ಅಂತಹ ಜನರ ನಮಾಝ್ ಸರಿಯಾಗಿರಲಿಲ್ಲ ಎಂದು ನಾವು ತೀರ್ಪು ನೀಡಲಾರೆವು. ಆ ಕಾಲದಲ್ಲಿ ಎಲ್ಲ ಹದೀಸುಗಳು ಸಂಗ್ರಹಿಸಲ್ಪಟ್ಟಿರಲಿಲ್ಲ. ಈಗ ಪ್ರಕಟವಾದ ರಹಸ್ಯಗಳು ಆಗ ಪ್ರಕಟವಾಗಿರಲಿಲ್ಲ. ಆದುದರಿಂದ ಅವರು ಕ್ಷಮಾರ್ಹರಾಗಿದ್ದಾರೆ. ಈಗ ಈ ಪ್ರಶ್ನೆ ಪರಿಹರಿಸಲ್ಪಟ್ಟಿದೆ. ಈಗ ಸೂರತುಲ್ ಫಾತಿಹ ಓದದಿದ್ದರೆ ಅಂತಹ ಜನರ ನಮಾಝ್ ಅಂಗೀಕಾರದ ಪದವಿಗೆ ತಲಪಲಾರದು.

ಕೆಲವು ಸಾರಿ ನಮಾಝ್‌ಗಳನ್ನು ಜಂಅ್ ಮಾಡಲಾಗುತ್ತಿದೆ. ಝುಹರ್–ಅಸರ್ ಮತ್ತು ಮಗ್‌ರಿಬ್–ಇಶಾ ನಮಾಝ್‌ಗಳು. ತಡವಾಗಿ ಬರುವವರಿಗೆ ಯಾವ ನಮಾಝುನ್ನು ನಿರ್ವಹಿಸಲಾಗುತ್ತದೆ ಎಂದು ತಿಳಿಯುವುದಿಲ್ಲ. ಹಝ್ರತ್ ಖಲೀಫತುಲ್ ಮಸೀಹ್ ಸಾನಿ ಹೇಳುತ್ತಾರೆ: ನಾನು ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮರಿಂದ ಆಲಿಸಿದ್ದೇನೆ: ಇಮಾಮ್ ಅಸರ್ ನಮಾಝ್‌ಗೆ ನೇತೃತ್ವ ನೀಡುವಾಗ ಝುಹರ್ ನಮಾಝ್ ಅನುಷ್ಠಿಸದ ಒಬ್ಬನು ಬಂದರೆ ಅವನು ಮೊದಲು ಝುಹರ್ ನಮಾಝ್ ಅನುಷ್ಠಿಸಿ ಅನಂತರ ಇಮಾಮ್ ಜೊತೆ ಸೇರಿ ಅಸರ್ ನಮಾಝ್ ಅನುಷ್ಠಿಸಬಹುದು. ಅದೇರೀತಿ ಇಶಾ ನಮಾಝ್‌ಗೆ ಇಮಾಮ್ ನೇತೃತ್ವ ನೀಡುವಾಗ ಮಗ್‌ರಿಬ್ ನಮಾಝ್ ಅನುಷ್ಠಿಸದ ಒಬ್ಬನು ಬಂದರೆ ಅವನು ಮೊದಲು ಮಗ್‌ರಿಬ್ ನಮಾಝುನ್ನು ನಿರ್ವಹಿಸಿ ಅನಂತರ ಇಮಾಮರ ಜೊತೆ ಸೇರಿ ನಮಾಝ್ ಅನುಷ್ಠಿಸಬೇಕು.

ನಮಾಝ್‌ಗಳನ್ನು ಜಂಅ್ ಮಾಡಿ ನಿರ್ವಹಿಸುವಾಗ ಒಬ್ಬನು ಮಸ್‌ಜಿದ್‌ಗೆ ಬಂದಾಗ ಅವನಿಗೆ ಇಮಾಮ್ ಯಾವ ನಮಾಝ್‌ಗೆ ನೇತೃತ್ವ ನೀಡುತ್ತಿದ್ದಾರೆ ಎಂದು ತಿಳಿಯದಿದ್ದರೆ ಅವನು ಇಮಾಮ್ ಜೊತೆ ಸೇರಿ ನಮಾಝ್ ನಿರ್ವಹಿಸಬೇಕು. ನಂತರ ಇಮಾಮ್ ಅಸರ್ ನಮಾಝ್ ಅನುಷ್ಠಿಸುತ್ತಿದ್ದರು ಎಂದು ತಿಳಿದುಬಂದರೆ, ಅವನು ಅನಂತರ ಝುಹರ್ ನಮಾಝ್ ನಿರ್ವಹಿಸಬೇಕು. ಯಾಕೆಂದರೆ, ಇಮಾಮ್ ಯಾವ ನಮಾಝ್ ನಿರ್ವಹಿಸುತ್ತಾರೋ ಹಿಂದೆ ನಿಂತವರ ನಮಾಝ್ ಸಹ ಅದೇ ಆಗುತ್ತದೆ. ಇದೇ ರೀತಿ ಇಶಾ ನಮಾಝ್ ಇಮಾಮ್ ನಿರ್ವಹಿಸುವಾಗ ಆ ನಮಾಝ್ ಯಾವುದೆಂದು ತಿಳಿಯದೆ ಇದ್ದಾಗ ತಡವಾಗಿ ನಮಾಝ್‌ಗೆ ಬಂದವನು ಆ ನಮಾಝುನ್ನು ಇಮಾಮರ ಜೊತೆ ಅನುಷ್ಠಿಸಿ ತಾನು ನಿರ್ವಹಿಸದೆ ಇದ್ದ ಮಗ್‌ರಿಬ್ ನಮಾಝುನ್ನು ಅನಂತರ ಅನುಷ್ಠಿಸಬೇಕು. ಇದು ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮರ ಫತ್ವ ಪ್ರಕಾರವಾಗಿದೆ.

ಶೇಖ್ ಯಅ್‌ಖೂಬ್ ಅಲಿ ಇರ್‌ಫಾನಿ ಸಾಹೇಬ್ ಬರೆಯುತ್ತಾರೆ: ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್, ಸುನ್ನತ್ ಮತ್ತು ನಫ್ಲ್ ನಮಾಝ್‌ಗಳನ್ನು ಮನೆಯಲ್ಲಿ ನಿರ್ವಹಿಸುತ್ತಿದ್ದರು. ಫರ್ಝ್ ನಮಾಝ್‌ಗಳನ್ನು ಬಾಜಮಾಅತಾಗಿ ಮಸ್‌ಜಿದ್‌ನಲ್ಲಿ ನಿರ್ವಹಿಸುತ್ತಿದ್ದರು. ಅವರು ತಮ್ಮ ಜೀವಿತದ ಕೊನೆಯ ವರೆಗೆ ಹೀಗೆಯೇ ಮಾಡುತ್ತಿದ್ದರು. ಖಲೀಫತುಲ್ ಮಸೀಹ್ ಅವ್ವಲ್ ರಝಿಯಲ್ಲಾಹು ಅನ್‌ಹು ಒಮ್ಮೆ ಪವಿತ್ರ ಖುರ್‌ಆನಿನ ದರ್ಸ್ ನೀಡುವಾಗ ಹೇಳಿದರು: ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮರು ಫರ್ಝ್ ನಮಾಝ್ ನಿರ್ವಹಿಸಿದ ಕೂಡಲೆ ಮನೆಗೆ ಹೋಗುತ್ತಿದ್ದರು. ನಾನು ಸಹ ಹೆಚ್ಚಾಗಿ ಹೀಗೆಯೇ ಮಾಡುತ್ತೇನೆ. ಈ ಕಾರಣದಿಂದ ಕೆಲವು ಮಕ್ಕಳಿಗೆ ಸಹ ಇದೇ ಅಭ್ಯಾಸವಾಗಿದೆ. ಅವರು ಫರ್ಝ್ ನಮಾಝ್ ನಿರ್ವಹಿಸಿದ ಕೂಡಲೆ ಮಸ್‌ಜಿದ್‌ನಿಂದ ಹೊರಗೆ ಹೋಗುತ್ತಾರೆ. ನಮ್ಮ ಅಭಿಪ್ರಾಯ ಪ್ರಕಾರ ಅವರು ಸುನ್ನತ್ ನಮಾಝ್ ನಿರ್ವಹಿಸುವುದಿಲ್ಲ. ಅವರು ತಿಳಿಯಬೇಕಾದುದೇನೆಂದರೆ ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮರು ಮನೆಗೆ ಹೋದ ಕೂಡಲೆ ಸುನ್ನತ್ ನಮಾಝ್ ಅನುಷ್ಠಿಸುತ್ತಾರೆ. ನಾನು ಸಹ ಹಾಗೆಯೇ ಮಾಡುತ್ತೇನೆ.

ಇಮಾಮತ್ ಒಂದು ಉದ್ಯೋಗವಾಗಿ ಮಾಡಬಹುದೇ ಎಂದು ಪ್ರಶ್ನೆ ಕೇಳಲಾಯಿತು. ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಹೇಳಿದರು: ಇಮಾಮತ್ ಉದ್ಯೋಗ ಮಾಡುವವರು ಐದು ಹೊತ್ತು ಹೋಗಿ ನಮಾಝ್ ನಿರ್ವಹಿಸುವವರಲ್ಲ. ಅವರು ಸಮಯದಲ್ಲಿ ಹೋಗಿ ಒಂದು ಅಂಗಡಿಯನ್ನು ತೆರೆಯುತ್ತಾರೆ. ಈ ಅಂಗಡಿ ಅವರ ಮತ್ತು ಅವರ ಕುಟುಂಬದ ಜೀವನಾಧಾರವಾಗಿದೆ. ಇದು ಇಮಾಮತ್ ಅಲ್ಲ. ಇದು ಹರಾಮ್‌ಖೂರಿ (ನಿಷಿದ್ಧ ಭಕ್ಷಣದ) ಒಂದು ಅಸಹ್ಯ ರೀತಿಯಾಗಿದೆ. ನನ್ನ ಅಭಿಪ್ರಾಯ ಪ್ರಕಾರ ಒಂದು ಉದ್ಯೋಗದ ರೀತಿಯಲ್ಲಿ ನಮಾಝ್‌ಗೆ ನೇತೃತ್ವ ವಹಿಸುವವರ ಹಿಂದೆ ನಮಾಝ್ ಅನುಷ್ಠಾನ ಸರಿಯಲ್ಲ. ಅವರು ಗುರುವಾರದ ರೊಟ್ಟಿಗೋಸ್ಕರ ಅಥವಾ ಸಂಬಳಕ್ಕೋಸ್ಕರ ನಮಾಝ್‌ಗೆ ನೇತೃತ್ವ ನೀಡುತ್ತಾರೆ. ಅದು ಸಿಗದಿದ್ದರೆ ಅವರು ಅದನ್ನು ಬಿಟ್ಟು ಬಿಡುತ್ತಾರೆ.

ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮರನ್ನು ಕಾಫಿರ್ ಎಂದು ಕರೆಯುವವರ ಹಿಂದೆ ನಮಾಝ್ ನಿರ್ವಹಿಸುವ ಬಗ್ಗೆ ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಹೇಳಿದರು: ಕಾಫಿರ್ ಎಂದು ಹೇಳುವವರು ಮತ್ತು ಸುಳ್ಳುಗಾರ ಎಂದು ಆಕ್ಷೇಪಿಸುವವರು ನಾಶ ಹೊಂದಿದ ಜನರಾಗಿದ್ದಾರೆ. ಅಂತಹ ಜನರ ಹಿಂದೆ ನಿಂತು ನನ್ನ ಜಮಾಅತಿನ ಯಾರೂ ನಮಾಝ್ ನಿರ್ವಹಿಸಬಾರದು. ಜೀವಂತವಾಗಿರುವವನು ಮೃತನ ಹಿಂದೆ ನಮಾಝ್ ನಿರ್ವಹಿಸುವನೇ? ನೀವು ನೆನಪಿಡಿರಿ ಅಲ್ಲಾಹನು ನನಗೆ ತಿಳಿಸಿರುವನು, ನನ್ನನ್ನು ಕಾಫಿರ್ ಎಂದು ಹೇಳುವವರ, ಸುಳ್ಳುಗಾರನೆಂದು ಆಕ್ಷೇಪಿಸುವವರ, ತಿರಸ್ಕರಿಸುವವರ ಹಿಂದೆ ನಿಂತು ನಮಾಝ್ ನಿರ್ವಹಿಸುವುದು ನಿಷಿದ್ಧವಾಗಿದೆ; ಅತ್ಯಂತ ನಿಷಿದ್ಧವಾಗಿದೆ. ನಿಮ್ಮ ಇಮಾಮ್ ನಿಮ್ಮವನೇ ಆಗಬೇಕು. ಬುಖಾರಿಯ ಹದೀಸು ಸಹ **ಇಮಾಮುಕುಮ್ ಮಿನ್‌ಕುಮ್** ನಿಮ್ಮ ಇಮಾಮ್ ನಿಮ್ಮಿಂದ ಎಂದು ಹೇಳಿ ಇದನ್ನೇ ಸೂಚಿಸುತ್ತದೆ.

ಇಬ್ಬರು ಬೈಅತ್ ಮಾಡಿದರು. ಒಬ್ಬ ಪ್ರಶ್ನಿಸಿದರು: ಅಹ್ಮದಿಯೇತರರ ಹಿಂದೆ ನಮಾಝ್ ಮಾಡಬಹುದೇ ಎಂದು. ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಹೇಳಿದರು: ಅವರು ನಮ್ಮನ್ನು ಕಾಫಿರ್ ಎಂದು ಕರೆಯುತ್ತಾರೆ. ನಾವು ಕಾಫಿರ್ ಅಲ್ಲವಾದರೆ ಅವರು ಆರೋಪಿಸಿದ ಕುಫ್ರ್ ಅವರ ಮೇಲೆ ಬೀಳುತ್ತದೆ. ಮುಸ್ಲಿಮನನ್ನು ಕಾಫಿರ್ ಎಂದು ಹೇಳುವವನು ಸ್ವತಃ ಕಾಫಿರ್ ಆಗುತ್ತಾನೆ. ಆದುದರಿಂದ ಅಂತಹ ಜನರ ಹಿಂದೆ ನಿಂತು ನಮಾಝ್ ಮಾಡಲು ಅನುಮತಿ ಇಲ್ಲ. ಕಾಫಿರ್ ಎಂದು ಹೇಳದೆ ಮೌನವಾಗಿರುವವರು ಸಹ ಇಂತಹ ಜನರಲ್ಲಿ ಸೇರುತ್ತಾರೆ. ಆದುದರಿಂದ ಅಂತಹ ಜನರ ಹಿಂದೆ ನಿಂತು ನಮಾಝ್ ಮಾಡುವುದು ಸರಿಯಲ್ಲ. ಇಂತಹ ಜನರು ಹೃದಯದೊಳಗೆ ನಮ್ಮ ವಿರುದ್ಧ ಅಭಿಪ್ರಾಯ ಹೊಂದಿರುತ್ತಾರೆ. ಆದುದರಿಂದ ಅವರು ನಮ್ಮೊಂದಿಗೆ

ಸೇರುವುದಿಲ್ಲ. ನೀವು ಅಂತಹ ಜನರೊಂದಿಗೆ ಸಂಬಂಧ ಇಟ್ಟುಕೊಂಡರೆ ಅಲ್ಲಾಹನು ನಿಮ್ಮ ಮೇಲೆ ಇಡುವಂತಹ ವಿಶಿಷ್ಟ ದೃಷ್ಟಿಯನ್ನು ಇಡಲಾರನು. ಪರಿಶುದ್ಧ ಜಮಾಅತ್ ಬೇರೆಯಾಗಿದ್ದರೆ ಅದರಲ್ಲಿ ಅಭಿವೃದ್ಧಿ ಉಂಟಾಗುತ್ತದೆ.

ಅಲ್ಲಾಹನು ನಮಗೆ ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮರು ಇಚ್ಛಿಸುವ ಹಾಗೆ ಈ ಜಮಾಅತಿನ ವಿಶಿಷ್ಟ ವ್ಯಕ್ತಿಗಳಾಗುವ ಭಾಗ್ಯ ದಯಪಾಲಿಸಲಿ – ಆಮೀನ್.

ಅಲ್ ಜಝಾಯಿರ್‌ನ(ಅಲ್‌ಜೀರಿಯಾದ) ಅಹ್ಮದಿಯರ ಬಗ್ಗೆ ವಿಶಿಷ್ಟವಾಗಿ ಪ್ರಾರ್ಥಿಸಬೇಕೆಂದು ಹೇಳಲು ಇಚ್ಛಿಸುತ್ತೇನೆ. ಇದು ಹೊಸ ಜಮಾಅತ್ ಆಗಿದೆ. ಅವರಲ್ಲಿ ಬಹುಸಂಖ್ಯೆಯ ಜನರು ಹೊಸದಾಗಿ ಬೈಅತ್ ಮಾಡಿದವರಾಗಿದ್ದಾರೆ. ಆದರೆ ಅವರ ವಿಶ್ವಾಸ ಬಹಳ ಬಲಿಷ್ಠವಾಗಿದೆ. ಈಗ ಸರಕಾರದ ಕಡೆಯಿಂದ ಕಠಿಣ ಕ್ರಮ ಜರಗಿಸಲಾಗುತ್ತದೆ. ಸುಳ್ಳು ಮೊಕದ್ದಮೆ ಹೂಡಲಾಗುತ್ತಿದೆ. ಕೆಲವರನ್ನು ಸೆರೆಮನೆಗೆ ಹಾಕಲಾಗಿದೆ. ಈ ಜನರು ದಾಯಿಶ್(IS) ಹಾಗೆ ಉಗ್ರವಾದಿಗಳು ಎಂದು ಆಪಾದಿಸಲಾಗುತ್ತಿದೆ– ನಊದುಃಬಿಲ್ಲಾಹ್. ನ್ಯಾಯಾಧೀಶರು ಸಹ ಅನ್ಯಾಯ ಮಾಡುತ್ತಿದ್ದಾರೆ. ಒಬ್ಬ ಅಹ್ಮದಿಯೊಂದಿಗೆ ಒಬ್ಬ ನ್ಯಾಯಾಧೀಶ ಹೇಳಿದರು– ನೀನು ಅಹ್ಮದಿಯತ್ತನ್ನು ನಿರಾಕರಿಸಿದರೆ ಈಗಲೇ ನಿನ್ನನ್ನು ಬಿಡುಗಡೆ ಮಾಡುತ್ತೇನೆ ಎಂದು. ಆದರೆ ಆ ಅಹ್ಮದಿ ಹೇಳಿದರು: ನಾನು ಸಾಯಲು ಸಿದ್ಧನಿದ್ದೇನೆ. ಆದರೆ ಅಹ್ಮದಿಯ್ಯತ್ತನ್ನು ಬಿಡಲಾರೆ. ನಾನು ನನ್ನ ವಿಶ್ವಾಸವನ್ನು ಬಿಡಲಾರೆ. ಏಕೆಂದರೆ ಇದೇ ನೈಜ ಇಸ್ಲಾಮ್ ಆಗಿದೆ. ಅದರ ಬಗ್ಗೆ ಈಗ ನನಗೆ ತಿಳಿಯಿತು. ಆಗ ನ್ಯಾಯಾಧೀಶ ಹೇಳಿದರು: ನೀನು ಹೀಗೆ ಹೇಳಿದ ಕಾರಣ ನಿನ್ನನ್ನು ನಿನ್ನ ಜೀವಿತದ ಅಂತ್ಯದ ತನಕ ಸೆರೆಮನೆಯಲ್ಲಿರಿಸುವೆನು. ಅಲ್ಲೇ ನೀನು ಮೃತನಾಗುವೆ. ಆಗ ಅಹ್ಮದಿ ಹೇಳಿದರು: ಒಳ್ಳೆಯದು ನೀವು ಮಾಡಬಹುದಾದುದನ್ನು ಮಾಡಿರಿ.

ಇದು ಈಗ ಅಲ್ಲಿನ ಸ್ಥಿತಿಯಾಗಿದೆ. ಅಹ್ಮದಿಯರಿಗೆ ಅಲ್ಲಾಹನು ಸುಖ ಸೌಲಭ್ಯಗಳನ್ನು ದಯಪಾಲಿಸಲಿ. ಅವರಿಗೆ ಅಲ್ಲಾಹನು ಸ್ಥಿರತೆಯನ್ನು ದಯಪಾಲಿಸಲಿ. ವಿರೋಧಿಗಳಿಗೆ, ಇಸ್ಲಾಮಿನ ಶತ್ರುಗಳಿಗೆ, ಅಹ್ಮದಿಯ್ಯತ್ತಿನ ಶತ್ರುಗಳಿಗೆ ಅಲ್ಲಾಹನು ಅವರ ಕೆಡುಕುಗಳನ್ನು ಅವರ ಮೇಲೆಯೇ ಮರಳಿ ಬೀಳುವಂತೆ ಮಾಡಲಿ. ಅಲ್ಲಾಹನು ಪ್ರತಿಯೊಬ್ಬ ಅಹ್ಮದಿಯನ್ನು ಈ ದೌರ್ಜನ್ಯಗಾರರಿಂದ ರಕ್ಷಿಸಿ ತನ್ನ ಆಶ್ರಯ ನೀಡಲಿ – ಆಮೀನ್.

——————————*****——————————


***Friday Sermon delivered by Hadrath Khaleefatul Masih Al Khamis***$^{(atba)}$

*At, Masjid Baithul Futhuh, London on 27-01-2017.*

**Summarized by** *Majlis Ansarullah Bharat*

***Kannada Translation:*** M. Ubeidullah for Kannada Desk, Qadian

***Reviewed by:*** M.P Ibrahim | ***Typing:*** U Basheer Ahmad

***Published By:*** Kannada Isha'at Team for Nazarath Nashr-O-Isha'ath, Qadian



***Email***: *khutuba.kannada@gmail.com*



**You can find all the Sermons archived at**: www.alislam.org/friday-sermon